**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ.2550/2025**

ಸಿ.ಡಬ್ಲ್ಯು 02

ಪಿ.ಡಬ್ಲ್ಯು 03

ಸಾಕ್ಷಿದಾರರ ಹೆಸರು - **ಮಂಕಾಳಿ ರಾಮಾ ಗೌಡಾ**

ತಂದೆಯ ಹೆಸರು - ರಾಮಾ ಗೌಡಾ

ವಯಸ್ಸು - 49 ವರ್ಷ

ಉದ್ಯೋಗ - ಖಾಸಗಿ ಕೆಲಸ

ವಾಸ್ತವ್ಯ - ಗೋಕರ್ಣ

(ಇಂದು ದಿನಾಂಕಃ **19-01-2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಚಾಸಾ 1 ಹಾಗೂ 3 ರವರ ಪರಿಚಯ ಇದೆ. ಮೃತ ಲಲಿತಾ ಇವರು ಬೈಕ್‌ನಿಂದ ಹಿಂದುಗಡೆ ಬರುತ್ತಿರುವಾಗ ಬಿದ್ದು ಮೃತಪಟ್ಟಿರುತ್ತಾರೆ. ಈ ಕುರಿತಾಗಿ ನಾನು ಶವ ತನಿಖಾ ವರದಿ ಹಾಗೂ ಪಂಚನಾಮೆಯ ಸಂದರ್ಭದಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

ಸಾಕ್ಷಿಗೆ ನಾಲ್ಕು ದಾಖಲಾತಿಗಳನ್ನು ತೋರಿಸಿದ್ದು, ಸಾಕ್ಷಿಯು ಸದ್ರಿ ದಾಖಲಾತಿಗಳಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಗಳು **ಪಂಚನಾಮೆ** ಹಾಗೂ **ಕಚ್ಚಾ ನಕಾಶೆ ಹಾಗೂ ಶವ ತನಿಖಾ ವರದಿ ಹಾಗೂ ಮೋಟಾರ ವಾಹನವನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ**

**ಮಾಡಿದ ಪಂಚನಾಮೆ**ಯಾಗಿದ್ದು, ಅವುಗಳಲ್ಲಿ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ 2 ಎಂದು, ಕಚ್ಚಾ ನಕಾಶೆಯನ್ನು ಈಗಾಗಲೇ **ನಿ.ಪಿ.3**. ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ.2ಬಿ ಹಾಗೂ 3ಬಿ ಎಂದು** ಗುರುತಿಸಲಾಯಿತು. ಶವ ತನಿಖಾ ವರದಿಯನ್ನು **ನಿ.ಪಿ.8** ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ.8ಎ ಎಂದು, ಮೋಟಾರ ವಾಹನವನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಮಾಡಿದ ಪಂಚನಾಮೆಯನ್ನು ನಿಪಿ9,** ಸಾಕ್ಷಿಯ ಸಹಿಯನ್ನು **ನಿ.ಪಿ.9ಎ ಎಂದು** ಗುರುತಿಸಲಾಯಿತು. ಸದ್ರಿ ಸಂದರ್ಭದಲ್ಲಿ ತೆಗೆದ ಭಾವಚಿತ್ರವನ್ನು ನಿಪಿ10 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 4 ಹಾಗೂ 5ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ನಿ.ಪಿ.8 ರ ಸಂದರ್ಭದಲ್ಲಿ ತೆಗೆದ ಭಾವಚಿತ್ರವನ್ನು ನಿಪಿ 11 ಎಂದು ಗುರುತಿಸಲಾಯಿತು.

ನಿಪಿ 2 ಹಾಗೂ 9 ರಲ್ಲಿ ಬರೆದಿರುವ ವಿಷಯ ನನಗೆ ತಿಳಿದಿಲ್ಲ. ನಿಪಿ 11, 12 ಹಾಗೂ ನಿಪಿ 4 ಹಾಗೂ 5 ನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನಾನು ಎಲ್ಲಾ ದಾಖಲಾತಿಗಳಿಗೆ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕಃ 29/06/2025 ರಂದು ಚಾಸಾ 13 ರವರು ನನ್ನನ್ನು ಮೃತ ಲಲಿತಾ ಇವರ ಶವ ಪಂಚನಾಮೆಯ ಕುರಿತು ಪಂಚ ಸಾಕ್ಷಿದಾರರನ್ನಾಗಿ ಹಾಜರ ಇಡಲು ಕರೆದಿರುತ್ತಾರೆ ಎಂದರೆ ಸರಿಯಲ್ಲ, ಅದರಂತೆ ಅವರು 15-20 ಗಂಟೆಯಿಂದ 16-30

ಗಂಟೆಯವರೆಗೆ ನಿಪಿ 11 ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 8 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 30/06/2025 ರಂದು ಚಾ 13 ರವರು ನನ್ನನ್ನು ಹಾಗೂ ಚಾಸಾ 3 ರವರನ್ನು ಘಟನಾ ಸ್ಥಳದ ಪಂಚನಾಮೆಯ ಕುರಿತಂತೆ ಘಟನಾ ಸ್ಥಳಕ್ಕೆ ಕರೆದಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಘಟನಾ ಸ್ದಳದಲ್ಲಿ ಚಾಸಾ 1 ರವರು ತೋರಿಸಿದಂತೆ 12-00 ಗಂಟೆಯಿಂದ 12-20 ಗಂಟೆಯವರೆಗೆ ನಿಪಿ 2 ರಂತೆ ಪಂಚನಾಮೆಯನ್ನು ಮಾಡಿ ನಿಪಿ 3 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿ ನಿಪಿ 4 ಹಾಗೂ 5 ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ,

ದಿನಾಂಕಃ 30/06/2025 ರಂದು ಚಾಸಾ 13 ರವರು ನನ್ನನ್ನು ಹಾಗೂ ಚಾಸಾ 3 ರವರನ್ನು ಮೋಟಾರ ಸೈಕಲ್ ಪಂಚನಾಮೆಗೆ ಗೋಕರ್ಣ ಪೊಲೀಸ ಠಾಣಾ ಆವರಣಕ್ಕೆ ಕರೆದಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಘಟನಾ ಸ್ದಳದಲ್ಲಿ ಚಾಸಾ 1 ರವರು ತೋರಿಸಿದಂತೆ 12-35 ಗಂಟೆಯಿಂದ 12-50 ಗಂಟೆಯವರೆಗೆ ನಿ.ಪಿ.9 ರಂತೆ ಪಂಚನಾಮೆಯನ್ನು ಮಾಡಿ ನಿ.ಪಿ.10 ರಂತೆ ಛಾಯಾಚಿತ್ರವನ್ನು ತಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 9 ರ ಸಮಯದಲ್ಲಿ ನನ್ನ ಹಾಗೂ ಚಾ3 ರವರ ಸಮಕ್ಷಮ ಪೊಲೀಸರು ಕೆಎ 47 ಎಲ್ 6055 ನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ,

ನಿಪಿ 9 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಹಾಗೂ ಸದ್ರಿ ವಾಹನವನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ,

**ಪಾಟೀ ಸವಾಲು –ಆರೋಪಿ ಪರ ಶ್ರೀಮತಿ. ಪಿ.ಎಚ್.ಕೆ. ವಕೀಲರಿಂದ**

ಅಪಘಾತವು ಯಾರ ತಪ್ಪಿನಿಂದ ಹೇಗೆ ಆಯಿತು ಎಂದು ನನಗೆ ತಿಳಿದಿಲ್ಲ. ಸದ್ರಿ ಸಂದರ್ಭದಲ್ಲಿ ವಾಹನವನ್ನು ಯಾರು ಓಡಿಸುತ್ತಿದ್ದರು ಎಂದು ನನಗೆ ತಿಳಿದಿಲ್ಲ. ಅಪಘಾತಪಡಿಸಿದೆ ಎನ್ನಲಾದ ವಾಹನವನ್ನು ಯಾರಿಗೆ ಸಂಬಂಧಿಸಿದ್ದು ಎಂಬ ಬಗ್ಗೆ ನನಗೆ ತಿಳಿದಿಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ